# ಭಾವದ ಹೂ!

ದಶಕಗಳಿಂದ ಸಂಗೀತದ ಅಮೃತಸುಧೆ ಹರಿಸುತ್ತಿರುವ ವಾಣಿ ಜಯರಾಂ ಅವರದು – ದಿವ್ಯ ಅನುಭೂತಿ ಹಾಗೂ ಕಲ್ಪನಾಶಕ್ತಿಯ ಸೃಜನಶೀಲತೆಯನ್ನೊಳಗೊಂಡ ಗಂಧರ್ವ ಕಂಠ. ಅವರಿಗೀಗ ಪದ್ಮಭೂಷಣ ಸಮ್ಮಾನ.

**ಮಹತಿ**



ಹಾಡು ಹುಟ್ಟುವ ಸಮಯ
ವಾಣಿ ಜಯರಾಂ ಅವರೊಂದಿಗೆ ನಿರ್ದೇಶಕ ಎಸ್.ವಿ. ರಾಜೇಂದ್ರಸಿಂಗ್ ಬಾಬು, ಅಂಬರೀಶ್ ಹಾಗೂ ಆರ್.ಎನ್. ಜಯಗೋಪಾಲ್.

ಪ್ರಣಯಿನಿಯ ಹತಾಶೆಯನ್ನು ಬಿಂಬಿಸುವ 'ಹೋದೆಯಾ ದೂರ ಓ ಜೊತೆಗಾರ', ಆಧುನಿಕ ಯುವತಿಯ ದಿಟ್ಟ ಅಭಿವ್ಯಕ್ತಿಯ 'ಈ ಶತಮಾನದ ಮಾದರಿ ಹೆಣ್ಣು', ಭಕ್ತಿ–ಶರಣಾಗತಿಯ ಪರಾಕಾಷ್ಠೆಯ 'ದಾರಿ ಕಾಣದಾಗಿದೆ ರಾಘವೇಂದ್ರನೆ', ಹೂವು ಅರಳಿದಂತೆ ಭಾವನೆಗಳು ಅರಳುವ 'ಭಾವವೆಂಬ ಹೂವು ಅರಳಿ' – ಈ ಎಲ್ಲ ಗೀತೆಗಳಲ್ಲಿನ ಸಾಮಾನ್ಯ ಅಂಶ – ವಾಣಿ ಜಯರಾಂ ಎನ್ನುವ ಗಂಧರ್ವ ಕಂಠ!

2023ರ ಸಾಲಿನ 'ಪದ್ಮ' ಪುರಸ್ಕಾರಗಳು ಪ್ರಕಟಗೊಂಡಾಗ, 'ಪದ್ಮಭೂಷಣ' ಪ್ರಶಸ್ತಿ ಪಟ್ಟಿಯಲ್ಲಿದ್ದ ವಾಣಿ ಜಯರಾಂ ಅವರ ಹೆಸರನ್ನು ನೋಡಿದ ಅನೇಕ ಕನ್ನಡಿಗರು, ತಮ್ಮ ಭಾಷಿಕರೊಬ್ಬರಿಗೆ ಗೌರವ ಸಂದಂತೆ ಸಂಭ್ರಮಿಸಿದರು. ಅದಕ್ಕೆ ಕಾರಣ, ವಾಣಿ ತಮಿಳಿಗರೆಂದು ಕನ್ನಡಿಗರಿಗೆ ಎಂದೂ ಅನ್ನಿಸಿಯೇ ಇಲ್ಲ. 'ಸವಿ ನೆನಪುಗಳು ಬೇಕು ಸವಿಯಲೀ ಬದುಕು', 'ನಗು ನೀ ನಗು' ರೀತಿಯ ಹಾಡುಗಳಿಗೆ ಜೀವತುಂಬಿದ ಗಾಯಕಿ ನಮ್ಮವರಾಗದೇ ಇರಲು ಸಾಧ್ಯವೆ? ಕಲೆ ತನ್ನ ಆತ್ಯಂತಿಕ ಸ್ಥಿತಿಯಲ್ಲಿ ಕಟ್ಟುಪಾಡುಗಳನ್ನು ಮೀರುತ್ತದೆ ಎನ್ನುವುದಕ್ಕೆ ವಾಣಿ ಜಯರಾಂ ಅಪೂರ್ವ ನಿದರ್ಶನ.

ವಾಣಿ ತಮಿಳುನಾಡಿನ ಅಯ್ಯಂಗಾರ್ ಕುಟುಂಬಕ್ಕೆ ಸೇರಿದವರು (ಜ: ನ. 30, 1945). ಅವರ ತಾಯಿಯೂ ಸಂಗೀತ ಶಾರದೆಯಲ್ಲಿ ಹೂವು ಬೇಡಿದವರೇ. ಐದನೇ ವಯಸ್ಸಿಗೆ ಸಂಗೀತಾಭ್ಯಾಸ ಶುರು ಮಾಡಿದ ವಾಣಿ, ಎಂಟನೇ ವಯಸ್ಸಿನಲ್ಲಿ ಆಕಾಶವಾಣಿಗೆ ಹಾಡಿದ್ದರು. ಹತ್ತನೇ ವಯಸ್ಸಿನಲ್ಲಿ ಮೂರು ತಾಸಿನ ಸಂಗೀತ ಕಛೇರಿ ನೀಡಿದ್ದರು.

ಜಯರಾಂ ಅವರೊಂದಿಗಿನ ವಿವಾಹದ ನಂತರ ಮುಂಬೈನಲ್ಲಿ ನೆಲೆಸಿದ ವಾಣಿ, ಹಿಂದೂಸ್ತಾನಿ ಕಲಿಕೆ ಆರಂಭಿಸಿದರು. ಗಂಡ ಸಿತಾರ್ ವಾದಕ ಆಗಿದ್ದುದು ಪತ್ನಿಯ ಸಂಗೀತ ಸಾಧನೆಗೆ ಪೂರಕವಾಯಿತು.



ಮರಾಠಿ ಸಂಗೀತ ನಿರ್ದೇಶಕ ವಸಂತ ದೇಸಾಯಿ ಅವರ ಮೂಲಕ ವಾಣಿ ಅವರಿಗೆ ಸಿನಿಮಾದಲ್ಲಿ ಹಾಡುವ ಅವಕಾಶ ದೊರೆಯಿತು. ನಂತರದಲ್ಲಿ, ಹಿಂದಿ ಚಿತ್ರ ನಿರ್ದೇಶಕ ಹೃಷಿಕೇಶ್ ಮುಖರ್ಜಿ ಅವರ 'ಗುಡ್ಡಿ' ಚಿತ್ರದಲ್ಲಿ ಹಾಡಿದರು. ಮುಂದಿನದು ಹಾಡು ಅಮೃತದ ಹೊನಲಾದ ಸಮಯ.

'ಅಪೂರ್ವ ರಾಗಂಗಳ್', 'ಶಂಕರಾಭರಣಂ' ಹಾಗೂ 'ಮೀರಾ' ಹಿನ್ನೆಲೆ ಗಾಯಕಿಯಾಗಿ ವಾಣಿ ಅವರ ವೃತ್ತಿಜೀವನದ ಅಪೂರ್ವ ಚಿತ್ರಗಳು. ಮೂರೂ ಸಿನಿಮಾಗಳಲ್ಲಿನ ಗಾಯನಕ್ಕಾಗಿ ರಾಷ್ಟ್ರಪ್ರಶಸ್ತಿ ಸಮ್ಮಾನಕ್ಕೆ ಭಾಜನರಾದರು. 'ಶಂಕರಾಭರಣಂ' ಸಿನಿಮಾಕ್ಕೆ ವಾಣಿ ಅವರು ಹಾಡಿದ ಗೀತೆಗಳು, ಸಿನಿಮಾ ಸಂಗೀತದಲ್ಲಿ ಶಾಸ್ತ್ರೀಯ ಸಂಗೀತವನ್ನು ಪುನರುಜ್ಜೀವನಗೊಳಿಸುವ ಪ್ರಯತ್ನಗಳೆಂದೇ ಪ್ರಸಿದ್ಧವಾಗಿವೆ. ಗುಲ್ಜಾರ್ ಅವರ 'ಮೀರಾ' ಚಿತ್ರದಲ್ಲಿ, ಪಂಡಿತ್ ರವಿಶಂಕರ್ ಅವರೊಂದಿಗೆ ಕೆಲಸ ಮಾಡಿ, ಮೀರಾ ಭಜನ್‌ಗಳಿಗೆ ವಾಣಿ ಅವರು ಜೀವ ತುಂಬಿರುವುದನ್ನು ಚಿತ್ರರಸಿಕರೆಂದೂ ಮರೆಯರು.

'ಛಲಗಾರ' ಸಿನಿಮಾಕ್ಕೆ ಹಾಡುವ ಮೂಲಕ ವಾಣಿ ಅವರ ಕನ್ನಡ ಚಿತ್ರರಂಗದ ಸಖ್ಯ ಆರಂಭವಾಯಿತು. 'ಕೌಬಾಯ್ ಕುಳ್ಳ', 'ಉಪಾಸನೆ', 'ಶುಭಮಂಗಳ', 'ದೀಪ', 'ಅಪರಿಚಿತ', 'ಬೆಸುಗೆ', 'ಬಿಳೀ ಹೆಂಡ್ತಿ' – ಹೀಗೆ ಹಲವು ಸಿನಿಮಾಗಳ ಗೀತೆಗಳಿಗೆ ಜೀವತುಂಬಿದರು. ಕನ್ನಡದಲ್ಲಿ ಅವರು ಹಾಡಿರುವ ಗೀತೆಗಳ ಸಂಖ್ಯೆ 850ಕ್ಕೂ ಹೆಚ್ಚು.

ದಿವ್ಯ ಅನುಭೂತಿ, ತಾರಕ ಸ್ಥಾಯಿಯಲ್ಲೂ ದಣಿವರಿಯದ ದನಿ ಹಾಗೂ ಭಾವುಕತೆಯೊಂದಿಗೆ ಕಲ್ಪನಾಶಕ್ತಿಯ ಸೃಜನಶೀಲತೆಯನ್ನೂ ಒಳಗೊಂಡ ಗಾಯನಪ್ರತಿಭೆ ವಾಣಿ ಅವರದು. ಅವರು ಜೀವದುಂಬಿದ ಹಾಡುಗಳು ತಲೆಮಾರುಗಳಿಂದ ತಲೆಮಾರಿಗೆ ಬೆಳುದಿಂಗಳನ್ನು ಉಣಿಸುತ್ತಿವೆ.

ಕನ್ನಡ, ತಮಿಳು, ತೆಲುಗು, ತುಳು, ಹಿಂದಿ, ಮರಾಠಿ, ಮಲಯಾಳಂ, ಬಂಗಾಳಿ, ಒಡಿಯಾ ಸೇರಿದಂತೆ, 14 ಭಾಷೆಗಳಲ್ಲಿ 9 ಸಾವಿರಕ್ಕೂ ಹೆಚ್ಚು ಗೀತೆಗಳನ್ನು ಹಾಡಿರುವ ಹಿರಿಮೆ ವಾಣಿ ಜಯರಾಂ ಅವರದು. 'ಹಾಡುವುದೇ ನನ್ನ ಬದುಕು. ಹಾಡುವುದನ್ನು ನಾನೆಂದೂ ನಿಲ್ಲಿಸಲಾರೆ' ಎನ್ನುವ ಈ ಹಾಡುಹಕ್ಕಿಗೆ ಎಪ್ಪತ್ತೆಂಟರ ಪ್ರಾಯದಲ್ಲಿ 'ಪದ್ಮಭೂಷಣ' ಪ್ರಶಸ್ತಿ ಸಂದಿದೆ. ಪ್ರಶಸ್ತಿಗಳಿಗೆ ಗೌರವ ಬರುವುದು ಇಂಥವರಿಗೆ ಸಂದಾಗಲೇ ಅಲ್ಲವೆ?

ಪ್ರತಿಕ್ರಿಯಿಸಿ: feedback@sudha.co.in